ಸಿ ಸಿ ನಂಬರ 194/2021

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

**<u>ದಿನಾಂಕ 19.03.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಕೆ ಜೆ ಪಿ ವಕೀಲರಿಂದಃ-</u>**

ತಹಶೀಲ್ದಾರ ರಾಧಾ ಮಣಿಯವರು ನನ್ನ ಮೇಲೆ ರೌಡಿ ಶೀಟರ್ ಅಂತಾ ಓಪನ್ ಮಾಡಲು 2013 ರಲ್ಲಿ ಓಪನ್ ಆಗಿದೆ ಎಂದರೆ ಸರಿ. ಈಗ ಅದು ಮುಕ್ತಾಯ ಗೊಂಡಿದೆ. ರೌಡಿ ಶೀಟರ್ ಪ್ರಕರಣ ಮುಕ್ತಾಯಗೊಂಡಿದೆ ಅಂತಾ ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿರುವುದಿಲ್ಲಾ. ಹರಪನಹಳ್ಳಿ ಪೋಲೀಸರು ನಿಗಾ ಇಟ್ಟು ನನ್ನ ಚಟುವಟಿಕೆಗಳನ್ನು ಗಮನಿಸುತ್ತಿದ್ದಾರೆ ಎಂದರೆ ಸರಿಯಲ್ಲ. 2013 ರಿಂದ ಇಲ್ಲಿಯವರೆಗೆ ನಾನು ರೌಡಿ ಶೀಟರ್ ಆಗಿದ್ದು ಮುಕ್ತಾಯಗೊಂಡಿದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2011 ರಲ್ಲಿ ಗುನ್ನಾ ಸಂಖ್ಯೆ 40/2011 ಕಲಂ 143, 147, 323, 324, 354, 504, 506 ರ ಅಡಿಯಲ್ಲಿ ದಾಖಲಾಗಿತ್ತು ಎಂದರೆ ಸರಿ. ಈಗ ಅದು ಮುಕ್ತಾಯಗೊಂಡಿದೆ. ಗುನ್ನಾ ನಂಬರ 79/2012 143, 147, 148 323, 324, 354, 504, 506 ಸಹ ಕಲಂ 148 ಅಡಿಯಲ್ಲಿ ಪ್ರಕಾರ ದಾಖಲಾಗಿತ್ತು ಎಂದರೆ ಸರಿ. ಅದು ಕೂಡ ಮುಕ್ತಾಯಗೊಂಡಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಿ ಸಿ ನಂಬರ 12/2014 ನನ್ನ ವಿರುದ್ಧ ಇದೆ ಎಂದರೆ ಸರಿ. ಸಿ ಸಿ ನಂಬರ 343/2021 ರಂತೆ ಅದರಲ್ಲಿ ನಾನು ಆರೋಪಿಯಾಗಿದ್ದೇನೆ ಎಂದರೆ ಸರಿ. ನಾನು ವ್ಯವಸಾಯ ಮಾಡುತ್ತೇನೆ. ಆರ್ ಟಿ ಐ ಕಾರ್ಯಕರ್ತ ಆಗಿರುತ್ತೇನೆ. ಆರ್ ಟಿ ಐ ನಲ್ಲಿ ಅರ್ಜಿ ಸಲ್ಲಿಸುವುದು, ಜನರನ್ನು ಹೆದರಿಸಿ ಹಣ ವಸೂಲಿ ಮಾಡುವುದು ಧಂದೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ರಾಗಿಮಸಲವಾಡ ಗ್ರಾಮದಲ್ಲಿ ನಾನು ಸಿದ್ದಪ್ಪ ಮತ್ತು ಚಿಕ್ಕನಗೌಡ

| ಸಿಡಬ್ಲೂ | 1 | ಪಿಡಬ್ಲೂ | 1 |
|---|---|---|---|

ಮೂರು ಜನ ಸೇರಿ ಒಂದು ಗುಂಪನ್ನು ಕಟ್ಟಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಿದ್ದಪ್ಪ ಸರ್ಕಾರಕ್ಕೆ ಒಳಪಡುವ ಆಂಜನೇಯ ದೇವಸ್ಥಾನದ ಪೂಜಾರಿ ಆಗಿದ್ದರು ಎಂದರೆ ಸರಿ. ದೇವಸ್ಥಾನಕ್ಕೆ ಬರುವಂತಹ ಆದಾಯವನ್ನು ನಾನು ಮತ್ತು ಚಿಕ್ಕನಗೌಡ ಮೇಲುಸ್ತುವಾರಿ ನೋಡಿಕೊಳ್ಳುತ್ತೇವೆ ಎಂದರೆ ಸರಿಯಲ್ಲ. ದೇವಸ್ಥಾನದ ಹೆಸರನ್ನು ಹೇಳಿಕೊಂಡು ದೇವಸ್ಥಾನಕ್ಕೆ ಬರುವಂತಹ ಭಕ್ತಾಧಿಕಾರಿಗಳಿಂದ ಹಣ ವಸೂಲಿ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ದೇವಸ್ಥಾನಕ್ಕೆ ಬೋರ್ ವೆಲ್ ಹಾಕಿಸುತ್ತೇವೆ ಅಂತಾ ಸುಳ್ಳು ರಸೀದಿಗಳನ್ನು ಕೊಟ್ಟು ಭಕ್ತಾದಿಗಳಿಂದ ಹಣ ವಸೂಲಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ವಿಚಾರವಾಗಿ 19 ನೇ ಆರೋಪಿ ಶೇಖರಗೌಡ ಜಿಲ್ಲಾಧಿಕಾರಿಗಳಿಗೆ ನಾನು ಸಿದ್ದಪ್ಪ ಮತ್ತು ಚಿಕ್ಕನಗೌಡನ ವಿರುದ್ಧ ದೇವಸ್ಥಾನದ ಆದಾಯ ದೋಚುತ್ತಿದ್ದೇವೆ ಎಂಬ ದೂರನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ತೆಲಗಿ ಡೆಪ್ಯೂಟಿ ತಹಶೀಲ್ದಾರ ಆರ್ ಐ ರಾಜಸ್ವ ನಿರೀಕ್ಷಕರು ನಮ್ಮ ಗ್ರಾಮಕ್ಕೆ ವಿಚಾರಣೆಗೆ ಬಂದಿದ್ದರು ಎಂದರೆ ಸರಿ. ಆ ಸಂಧರ್ಭದಲ್ಲಿ ದೂರು ಕೊಟ್ಟಿರುವ 19 ನೇ ಆರೋಪಿ ಶೇಖರಗೌಡ ಸ್ಥಳದಲ್ಲಿ ಇದ್ದರು ಎಂದರೆ ಸರಿ. ಶೇಖರ ಗೌಡ ಗ್ರಾಮ ಪಂಚಾಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು ಎಂದರೆ ಸರಿ. ಚಾ ಸಾ 12 13 ಮತ್ತು 14 ರವರು ದೂರು ಅರ್ಜಿಯನ್ನು ತನಿಖೆ ಮಾಡಲು ಬಂದಾಗ ನಾವು 3 ಜನ ಏಕಾ ಏಕಿ ಶೇಖರಗೌಡನ ಕೊರಳಪಟ್ಟಿ ಹಿಡಿದು ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ವಿಚಾರದಲ್ಲಿ ನಮ್ಮ ವಿರುದ್ಧ ಕೂಡ ಪ್ರತಿ ಪ್ರಕರಣ ದಾಖಲಾಗಿದೆ ಎಂದರೆ ಸರಿ. ನಾನು ಸಲ್ಲಿಸಿದ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ. ನಾನು ಯವುದೇ ದೂರು ಕೊಟ್ಟಿಲ್ಲದಿದ್ದರೂ ಈ ಪ್ರಕರಣ ದಿಂದ

| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |
|---|---|---|---|

ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನೀಡಿದ ದೂರನ್ನು ವಿಚಾರಣೆ ಮಾಡಲು ಡಿ ಸಿ ರವರು ಯಾವಾಗ ಬಂದಿದ್ದರು ಹೇಳಲು ಆಗುವುದಿಲ್ಲ. ನಾನು ನೀಡಿದ ದೂರಿನ ಹಿನ್ನೆಲೆಯಲ್ಲಿ ಆರೋಪಿತರು ಹಲ್ಲೆ ಮಾಡಿದ್ದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಂಜನೇಯ ದೇವಸ್ಥಾನಕ್ಕೆ ಬಂಧಿಸಿದ ನಗದು ಹಣ, ನಾಣ್ಯ, ಬೆಳ್ಳಿ ಎಲ್ಲವನ್ನು ಸರ್ಕಾರದ ಆದೇಶದಂತೆ ತಹಶೀಲ್ದಾರ ರವರು ಸುಪರ್ದಿಯಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಯಾವುದೇ ಮುಜರಾಯಿ ಇಲಾಖೆಗೆ ಸಂಬಂಧಪಟ್ಟ ಚರಾಸ್ತಿಗಳು ತಹಶೀಲ್ದಾರರವರ ಕಚೇರಿಯಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಖಾಸಗಿ ವ್ಯಕ್ತಿಯ ಸುಪರ್ದಿನಲ್ಲಿ ದೇವಸ್ಥಾನದ ಚರಾಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡಿಲ್ಲ, ಕಿವಿಗೂ ಕೂಡ ಪೆಟ್ಟು ಆಗಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನಾನು ಯಾವುದೇ ಬಂಗಾರ ಧರಿಸಿಲ್ಲ. ಘಟನೆ ಆಯಿತು ಅಂತಾ ಹೇಳುವ ದಿನ ನನ್ನ ಮೈ ಮೇಲೆ ಇದ್ದ ಬಂಗಾರದ ಆಭರಣದ ಬಿಲ್ಲು ಇರುತ್ತದೆ. ನನ್ನ ಬ್ರಾಸ್ ಲೈಟ್ ಮತ್ತು ಚೈನ್ ಸಂಬಂಧಿಸಿದ ರಸೀದಿಯನ್ನು ನಾನು ಪೋಲೀಸರಿಗೆ ಕೊಟ್ಟಿರುವುದಿಲ್ಲ. ನಾನು ಇದುವರೆಗೆ ಒಂದು ಗ್ರಾಂ ಚಿನ್ನವನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 24.11.2011 ರಂದು ಡೆಪ್ಯೂಟಿ ತಹಶೀಲ್ದಾರ ಬಂದಾಗ ಗಲಾಟೆ ಆಯಿತು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು 28.11.2011 ರಂದು ಕೊಟ್ಟಿರುತ್ತೇನೆ. ದೂರು ಕೊಡಲು 4 ದಿನ ತಡ ಆಗಿದೆ ಎಂದರೆ ಸರಿ. ಚಿಕಿತ್ಸೆ ಪಡೆದ ಕಾರಣ ತಡ ಆಗಿರುತ್ತದೆ. ಚಿಗಟೇರಿ ಆಸ್ಪತ್ರೆಯಲ್ಲಿ ಅದೇ ದಿನ ಸಂಜೆ ಚಿಕಿತ್ಸೆ ಪಡೆದಿರುತ್ತೇನೆ. ನಾನು ಹೊರ ರೋಗಿ ಆಗಿ ಅದೇ ದಿನ

ಸಿ ಸಿ ನಂಬರ 194/2021

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

ಚಿಕಿತ್ಸೆ ಪಡೆದು ಮರಳಿ ಬಂದಿದ್ದೇನೆ ಎಂದರೆ ಸರಿ. 25, 26 27 ನೇ ತಾರೀಖು ರಂದು ಮನೆ ಯಲ್ಲಿ ಇದ್ದೆ ಎಂದರೆ ಸರಿ. ಹಿರಿಯರನ್ನು ವಿಚಾರಿಸುವ ಸಲುವಾಗಿ ತಡ ಆಗಿರುತ್ತದೆ. ನನ್ನ ಮತ್ತು ಪೂಜಾರಿ ಸಿದ್ದಪ್ಪನ ಮೇಲೆ ದೇವಸ್ಥಾನದ ಅವ್ಯವಹಾರದ ಬಗ್ಗೆ ತನಿಖೆ ಕಾಲಕ್ಕೆ ನಮ್ಮ ಮೇಲೆ ಆರೋಪ ಬರುತ್ತದೆ ಅಂತಾ ನನಗೆ 27 ನೇ ತಾರೀಖು ಗೊತ್ತಾಯಿತು ಎಂದರೆ ಸರಿಯಲ್ಲ. ನನ್ನ ಮೇಲೆ ತನಿಖೆ ಆಗಬಾರದು ಹಣವನ್ನು ಮರಳಿ ಮುಜರಾಯಿ ಇಲಾಖೆಗೆ ಕಟ್ಟಬೇಕಾಗುತ್ತದೆ ಎಂಬ ಉದ್ದೇಶ ದಿಂದ 28 ನೇ ತಾರೀಖು ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೊಲ ಮನೆ ಕೆಲಸ ಮಾಡುತ್ತೇನೆ ಮುಳ್ಳು ಕಡಿಯುತ್ತೇನೆ ಎಂದರೆ ಸರಿ. ಹೊಲದಲ್ಲಿ ಕೆಲಸ ಮಾಡುವಾಗ ಗಾಯಪಡಿಸಿಕೊಂಡಿದ್ದು ಆಸ್ಪತ್ರೆಗೆ ಹೋಗಿ 4 ದಿನಗಳ ನಂತರ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ರೌಡಿ ಶೀಟರ್ ಆಗಿದ್ದು ನಾನೇ ಹಲ್ಲೆ ಮಾಡಿದ್ದು ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.